

ಅಭಿಪ್ರಾಯಗಳ ಸಂಗ್ರಹ
ಉಮಾ ಅನಂತ್, ಸುಮಲತಾ ಎನ್.,
ರಾಘವೇಂದ್ರ ಕೆ., ಶಶಿಕುಮಾರ್ ಸಿ.



■ ನಾಗೇಶ ಹೆಗಡೆ

# ಸೆಲ್ಫೀಯುಗದಲ್ಲಿ ಲೋಕಚಿಂತನೆ

**‘ನಾನು’ವಿನಿಂದ ಹೊರಬಂದಷ್ಟೂ ತೆರೆಯುತ್ತವೆ ಅರಿವು-ಉಳಿವಿನ ಬಾಗಿಲು**

ನೋಡನೋಡುತ್ತ ನಾವು ಸೆಲ್ಫೀಯುಗದ ಮಧ್ಯಕ್ಕೆ ಬಂದುಬಿಟ್ಟಿದ್ದೇವೆ. ಗ್ರೀಕ್ ಪುರಾಣದಲ್ಲಿ ಬರುವ ನಾರ್ಸಿಸಸ್ ಹೆಸರಿನ ಯುವಕನೊಬ್ಬ ನೀರಲ್ಲಿ ತನ್ನ ಪ್ರತಿಬಿಂಬವನ್ನು ನೋಡಿ, ಅದರದ್ದೇ ಮೋಹಪಾಶಕ್ಕೆ ಬಿದ್ದು, ಅದರಲ್ಲೇ ಮುಳುಗಿ ಪ್ರಾಣ ತೆತ್ತನಂತೆ. ಅಂಥ ತೆವಲಿಗೆ ‘ಆತ್ಮರತಿ’ (ನಾರ್ಸಿಸಿಸಂ) ಎಂದು ಫ್ರಾಯ್ಡ್ ಹೆಸರಿಟ್ಟ. ಹಿಂದೆಲ್ಲ ಅಪರೂಪಕ್ಕೆ ಅವರಿವರಲ್ಲಿ ಈ ಗುಣ ಅಷ್ಟಿಷ್ಟು ಇತ್ತು. ಕನ್ನಡಿ ಬಂದ ಮೇಲೆ ಮಹಿಳೆಯರು ಗೇಲಿಗೆ ತುತ್ತಾಗಿದ್ದುಂಟು. ಆದರೆ ಮೊಬೈಲ್‌ನಲ್ಲಿ ಫ್ರಂಟ್ ಕ್ಯಾಮೆರಾ ಕೂರಿಸಿದ್ದೇ ತಡ, ಹೆಣ್ಣು ಗಂಡೆನ್ನದೆ ಇಂದು ನೂರಾರು ಕೋಟಿ ಜನರು ತಮ್ಮನ್ನೇ ಮತ್ತೆ ಮತ್ತೆ ಮೋಹಿಸುವಂತಾಗಿದೆ. ನಿಂತಲ್ಲಿ, ಕೂತಲ್ಲಿ, ಗಣ್ಯರ ಜೊತೆಯಲ್ಲಿ, ನಗಣ್ಯ ಕೊಂಬೆ, ಕಂಬ, ಕುನ್ನಿಮರಿ, ಹಳ್ಳದಿನ್ನೆಯ ಮಧ್ಯೆ ಎಲ್ಲೆಲ್ಲೂ ನಾನೇ ನಾನು ಎಂಬಂತಾಗಿದೆ. ಅದು ಎಷ್ಟರಮಟ್ಟಿಗೆ ಎಂದರೆ ‘ಸೆಲ್ಫೀ ವರ್ಲ್ಡ್’ (Selfie World) ಹೆಸರಿನ ಸರಣಿ ಮ್ಯೂಸಿಯಂಗಳೇ ಅನೇಕ ದೇಶಗಳಲ್ಲಿ ಹುಟ್ಟಿಕೊಂಡಿವೆ. ಅದರೊಳಕ್ಕೆ ಹೊಕ್ಕರೆ ನಿಮಗೆ ಬೇಕಾದ ದೃಶ್ಯ, ವೇಷಭೂಷಣ, ಸರಕು ಸಾಮಗ್ರಿ, ಮಾಯಾಪರದೆಗಳಿದ್ದು, ಅವುಗಳೊಂದಿಗೆ ನೀವು ಮೈದಣಿಯುವಷ್ಟು ಭಂಗಿಗಳಲ್ಲಿ ನಿಮ್ಮದೇ ಚಿತ್ರವನ್ನು ಕ್ಲಿಕ್ಕಿಸುತ್ತ ಕೂರಬಹುದು. ಅಥವಾ ಕುಣಿಯಬಹುದು, ತೇಲಬಹುದು. ಕಾಲುಮೇಲಾಗಿ ಮೈಮರೆಯಬಹುದು.

ನಾರ್ಸಿಸಸ್ ತನ್ನ ಬಿಂಬವನ್ನು ತಾನೊಬ್ಬನೇ ನೋಡಿ ಮರುಳಾಗಿ ಮಂಕಾದ. ಈಗಿನ ಸೆಲ್ಫೀ ಎಂಬ ಆತ್ಮರತಿಗೆ ಅವಕಾಶ ಕಲ್ಪಿಸಿದ ತಂತ್ರಜ್ಞಾನದ ಕತೆ ಏನೆಂದರೆ, ಅದು ನಿಮ್ಮ ಮರುಳಾಟವನ್ನು ಲೋಕಕ್ಕೆಲ್ಲ ಹೇಳುವ ಅಪಾರ ಅವಕಾಶವನ್ನೂ ಕಲ್ಪಿಸಿದೆ. ಹಾಗಾಗಿ ಸೋಶಿಯಲ್ ಮೀಡಿಯಾದಲ್ಲಿ ‘ಸ್ವಂತಿ’ಗೆ ವಿರಾಟ್ ರೂಪ ಸಿಕ್ಕಿದೆ. ‘ನಿನ್ನ